**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 6234/2023**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿ ಃ ಮೋಹನರೆಡ್ಡಿ ಮತ್ತು ಇತರರು.**

**ದೋಷಾರೋಪಣೆ**

ನಾನುಃ **ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ** ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ ಆದ ನಾನು ಆರೋಪಿಗಳಾದ

| | |
|---|---|
| ಆರೋಪಿ 1. | ಮೋಹನರೆಡ್ಡಿ ತಂದೆ ಮಹಾದೇವಪ್ಪ ಸಂಗಾರೆಡ್ಡಿ, ವಃ 48 ವರ್ಷ, |
| 2. | ಶರಣಪ್ಪ ತಂದೆ ಮಹಾದೇವಪ್ಪ ಸಂಗಾರೆಡ್ಡಿ, ವಃ 62 ವರ್ಷ, (ಮೃತಪಟ್ಟಿರುತ್ತಾರೆ) |
| 3. | ಶರಣಗೌಡ ತಂದೆ ಶಿವಾರೆಡ್ಡಿ ಬಾನಾಳ, ವಃ 36 ವರ್ಷ,<br>ಸಾಃ ರಾಚನಳ್ಳಿ ಗ್ರಾಮ,<br>ತಾಃ ಜಿಃ ಯಾದಗಿರಿ. |

**ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,**

ಮೊದಲನೆಯದಾಗಿ ದಿನಾಂಕಃ 23-08-2023 ರಂದು ಸಾಃ 05-30 ಗಂಟೆಗೆ ಸೈದಾಪುರಾ ಪೋಲಿಸ್ ಠಾಣೆ ಸರಹದ್ದಿಲ್ಲಿ ಬರುವ ರಾಚನಳ್ಳಿ ಗ್ರಾಮದ ಸೀಮಾಂತರ ಜಮೀನು ಸರ್ವೆ ನಂ. 76 ಜಮೀನಿನಲ್ಲಿ ಬೆಳದ ಹತ್ತಿ ಬೆಳೆಗೆ ಕ್ರಿಮಿನಾಶಕ ಔಷದಿ

ಸಿಂಪಡಿಸಲು ಚಾಸಾಃ1 ಮತ್ತು 4 ರವರು ಹೋಗಿದ್ದು, ಆರೋಪಿತರಾದ ನೀವು ಹೋಗಿ ತಮ್ಮ ಜಮೀನಿನಲ್ಲಿ ಯಾಕೆ ಟ್ರಾಕ್ಟರ್ ಚಲಾಯಿಸಿಕೊಂಡು ಬಂದಿಲ್ಲ ನೀವೆ ನಿನ್ನೆ ನಿಮ್ಮ ಹೊಲಕ್ಕೆ ಎಣ್ಣೆ ಹೊಡೆಯುವ ಕಾಲಕ್ಕೆ ಹತ್ತಿ ಗಿಡಗಳು ಬಾಗಿರಬಹುದು ನಿಮ್ಮ ಟ್ರಾಕ್ಟರ್ ಚಕ್ರದ ಗುರುತುಗಳು ಮತ್ತು ಈಗ ನಮ್ಮ ಜಮೀನಿನಲ್ಲಿ ಮೂಡಿದ ಟ್ರಾಕ್ಟರ್ ಗುರುತುಗಳು ಪರಿಶೀಲಿಸಿದ ನಂತರ ನನ್ನೊಟ್ಟಿಗೆ ಮಾತನಾಡು ಅಂತಾ ಅಂದಿಕ್ಕೆ ಆರೋಪಿತರಾದ ನೀವು ಚಾಸಾಃ1 ಮತ್ತು 4 ರವರಿಗೆ ಏನು ಸೆಂಟ ಟೈಯರ್ ಮಾರ್ಕ್ ನೋಡತ ಸೂಳೆ ಮಕ್ಕಳೆ ನಿಮಗೆ ಸೊಕ್ಕು ಬಹಳ ಬಂದಿದೆ ಅಂತಾ ಅವ್ಯಾಚ ಶಬ್ದಗಳಿಂದೆ ಬೈದಿದ್ದು, ಈ ಮೂಲಕ ನೀವು  ಭಾ.ದಂ.ಸಂ. 504 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರಾದ ನೀವು ಚಾಸಾಃ1 ಮತ್ತು 4 ರವರಿಗೆ ಕಲ್ಲುಗಳಿಂದ ಎದಗೆ, ಬೆನ್ನಿಗೆ ಹೊಡೆದಿದ್ದು, ಈ  ಮೂಲಕ ಭಾ. ದಂ. ಸಂ. ಕಲಂ 324 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರಾದ ನೀವು ಚಾಸಾಃ1 ಮತ್ತು 4 ರವರಿಗೆ ನೆಲಕ್ಕೆ ಕೆಡವಿ ಕಾಲುಗಳಿಂದ ಒದಿದ್ದು, ಈ  ಮೂಲಕ ಭಾ. ದಂ. ಸಂ. ಕಲಂ 323 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರಾದ ನೀವು ಚಾಸಾಃ1 ಮತ್ತು 4 ರವರಿಗೆ ಇನ್ನೊಮ್ಮೆ ನಮ್ಮ ಜಮೀನಿನಲ್ಲಿ ಕಾಲಿಟ್ಟರೆ ನಿಮ್ಮ ಜೀವ ಉಳಿಯುವುದಿಲ್ಲ

ಅಂತಾ ಜೀವ ಬೆದರಿಕೆ ಹಾಕಿದ್ದು, ಈ ಮೂಲಕ ಭಾ. ದಂ. ಸಂ. ಕಲಂ 506 ಸಹ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 07-12-2024**
**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**
**ನ್ಯಾಯಾಧೀಶರು ಯಾದಗಿರಿ.**